ಹೊರಬಂದುಬಿಟ್ಟ ಎಂದು ಅವನಿಗರ್ಥವಾಗುವ ಭಾಷೆಯಲ್ಲಿ ತಿಳಿಹೇಳಲು ಪ್ರಯತ್ನಿಸಿದೆ. ತನಗೆ ಆಟ ಆಡಲು ಜೊತೆ ಸಿಕ್ಕಂತಾಯಿತು ಎನ್ನುವಂತೆ ಅದರ ಕೆನ್ನೆ ಮುಟ್ಟಿ ನಕ್ಕು ನಗಿಸಲು ಪ್ರಯತ್ನಿಸಿದ. ಆದರೂ ಅಪ್ಪನಿಗೆ ಚಾಡಿ ಹೇಳಲು ಹವಣಿಸಿದವನಂತೆ, ಅಪ್ಪ ಕಾಣುತ್ತಿಲ್ಲವೆಂದು ಅಳಲಾರಂಭಿಸಿದ. ಆಗಲೇ ನನಗೂ ಗಂಡನ ನೆನಪಾದದ್ದು.

ಸಣ್ಣಮಗುವನ್ನು ಎದೆಗೆ ಆತುಹಿಡಿದು, ದೊಡ್ಡಮಗುವನ್ನು ಕಲ್ಲುಮುಳ್ಳುಗಳಿಲ್ಲದ ಕಡೆ ಮೆಲ್ಲಗೆ ನಡೆಸಿಕೊಂಡು, ಅಪ್ಪನನ್ನು ಹುಡುಕುವ ಬಾ ಎಂದು ಕರೆದೊಯ್ದೆ. ತಾಸು ಅರೆತಾಸು ಕಳೆಯುವ ವೇಳೆಗೆ ಗಂಡನೇನೋ ಸಿಕ್ಕ. ಆದರೆ ಮಲಗಿದಂತೆ ಬಿದ್ದಿದ್ದ ಶೈಲಿಗೆ ಭೀತಗೊಂಡು ಹತ್ತಿರ ಓಡಿಹೋಗಿ ನೋಡುತ್ತೇನೆ -ಬಾಯಲ್ಲಿ ಬುರುಗು ಬಂದಿದೆ. ಕಾಲಿನ ಮೀನುಕಂಡದ ಮೇಲೆ ಎರಡು ಸಣ್ಣ ಚುಕ್ಕಿಗಳಂತೆ ರಕ್ತ ಹೆಪ್ಪುಗಟ್ಟಿದೆ. ನನಗೆ ಮನವರಿಕೆಯಾಗಿಹೋಯಿತು, ರಾತ್ರಿ ಚಪ್ಪರಕ್ಕೆ ಸೊಪ್ಪು ಸೆದೆ ತರಲು ಹೋದ ವೇಳೆ ಹಾವು ಕಚ್ಚಿದೆಯೆಂದು!

ಏನು ಮಾಡಲಿ! ನನಗೇನೂ ತೋಚಲಿಲ್ಲ! ಸಾವಿನ ಆಘಾತಕ್ಕೆ ಎಣೆಯೇ ಇರಲಿಲ್ಲ! ಸಣ್ಣ ಮಗುವನ್ನು ನೆಲದ ಮೇಲೆ ಮೆಲ್ಲಗೆ ಮಲಗಿಸಿ, ಗಂಡನ ದೇಹದ ಮೇಲೆ ಬೋರಲು ಬಿದ್ದು ಅತ್ತೆ, ಅತ್ತೆ, ಅತ್ತೆ.. ಕಣ್ಣ ನೀರು ಇಂಗುವವರೆಗೂ ಅತ್ತೆ.. ನನಗೆ ನಾನೇ ಶಾಪ ಹಾಕಿಕೊಂಡೆ. ನನ್ನನ್ನೂ ಕೊನೆಗಾಣಿಸಿಕೊಳ್ಳಲು ಸುತ್ತಮುತ್ತ ಏನಾದರೂ ಸಿಗುತ್ತದೆಯೇ ಎಂದು ನೋಡಿದೆ. ಆದರೆ ಈ ಎರಡು ಪುಟ್ಟ ಕಂದಮ್ಮಗಳನ್ನು ಈ ದಟ್ಟ ಕಾಡಿನಲ್ಲಿ ಅನಾಥರನ್ನಾಗಿಸಿ ಸಾಯಲು ಮನಸ್ಸು ಬರಲಿಲ್ಲ. ಅವುಗಳ ಮುಖ ನೋಡಿ, ಏನಾದರೂ ಮಾಡಿ ಅವುಗಳಿಗೆ ಒಂದು ನೆಲೆ ಕಲ್ಪಿಸಲು ನಾನು ಬದುಕಿರಲೇಬೇಕೆಂಬ ಅನಿವಾರ್ಯತೆಗೆ ಬಂದೆ..

ಏನೂ ಅರಿಯದ ಎಳೆಯ ಕಂದ ಪಿಳಿಪಿಳಿ ಕಣ್ಣು ಬಿಡುತ್ತಿತ್ತು. ತಾನು ಹುಟ್ಟಿದ ತಕ್ಷಣ ತನ್ನ ತಂದೆಯನ್ನು ಕಳೆದುಕೊಂಡಿರುವೆನೆಂಬ ಎಳ್ಳಷ್ಟು ಅರಿವೂ ಅದಕ್ಕಿರಲಿಲ್ಲ.. ಗಂಡನೂ ಇಲ್ಲ, ಗಂಡನ ಮನೆಯೂ ಇಲ್ಲ. ಗಂಡನ ಮನೆಯೆಂಬುದೇನೂ ಸ್ವಂತದ್ದಾಗಿರಲಿಲ್ಲ. ಅನಿವಾರ್ಯವಾಗಿ ತವರು ಮನೆಗೆ ತೆರಳುವುದೆಂದು ನಿರ್ಧರಿಸಿದೆ. ಆದರೆ ಗಂಡನ ಶವಕ್ಕೆ ಸಂಸ್ಕಾರ ಮಾಡುವುದಾದರೂ ಹೇಗೆ?

ಹತ್ತಿರದಲ್ಲೇ ಇದ್ದ ಕಾಲುದಾರಿಗೆ ಬಂದು ಯಾರಾದರೂ ಸುಳಿದಾಡುವರೇನೋ ಎಂದು ಕಾದೆ. ಸಹಾಯಕ್ಕಾಗಿ ಸಮೀಪದಲ್ಲಿ ಯಾರಿದ್ದೀರಿ ಎಂದು ಕೂಗು ಹಾಕಿದೆ. ನನ್ನ ಅದೃಷ್ಟಕ್ಕೆ ನಾಲ್ಕು ಜನರ ಗುಂಪೊಂದು ಬೇಟೆಯಾಡಲು ಕಾಡಿಗೆ ಬಂದಿದ್ದರು. ಅವರಿಗೆ ಬಿಕ್ಕಳಿಸುತ್ತ ನನ್ನ ಅವಸ್ಥೆಯನ್ನು ವಿವರಿಸಿದೆ. ನಾನೇ ಕೊಂದಿರುವೆನೇನೋ ಎನ್ನುವಂತೆ ನನ್ನನ್ನೂ ನನ್ನ ಮಕ್ಕಳನ್ನೂ ಅನುಮಾನದ ಕಣ್ಣಲ್ಲೇ ಅಳೆದು ತೂಗಿ ನೋಡೋಣ ನಡೆಯಿರಿ ಎಂದು ಬಂದರು. ಹೆಪ್ಪುಗಟ್ಟಿದ ಹಾವಿನ ಹಲ್ಲಿನ ಗುರುತನ್ನೂ, ಬಾಯಲ್ಲಿ ಬಂದ ನೊರೆಯನ್ನೂ ಗ್ರಹಿಸಿ ಹಾವು ಕಡಿದೇ ಸತ್ತಿರುವುದೆಂದು ಗ್ರಹಿಸಿ, ನನ್ನನ್ನೂ ನನ್ನೆರಡು ಮಕ್ಕಳನ್ನೂ ಕಂಡು ಇನ್ನಷ್ಟು ಮರುಕ ವ್ಯಕ್ತಪಡಿಸಿದರು.

ಸಮೀಪದಲ್ಲೇ ಸಿಕ್ಕ ಒಣಸೌದೆಗಳನ್ನೆಲ್ಲ ಒಟ್ಟುಗೂಡಿಸಿದರು. ಅವೋ ನಿನ್ನೆ ಸುರಿದಿದ್ದ ಭಾರೀ ಮಳೆಗೆ ನೆನೆದು ಒದ್ದೆಯಾಗಿ ಹೋಗಿದ್ದರೂ ಸ್ವಲ್ಪ ಬಿಸಿ ತಾಗಿದರೆ ಹೊತ್ತಿ ಉರಿಯುವ ಎಲ್ಲ ಸಾಧ್ಯತೆಯಿತ್ತು. ಸ್ವಲ್ಪ ಹೆಚ್ಚಿನ ಪ್ರಮಾಣದ ಸೌದೆಗಳನ್ನು ಪೇರಿಸಿ ಬೆಂಕಿ ತಾಗಿಸಿದರು. ಯಾವಾಗ ಹಸಿಸೌದೆಯ ದಟ್ಟಹೊಗೆಯ ನಡುವೆಯೂ ಉರಿಯು ಆಕಾಶದವರೆಗೂ ಅಡರಿತೋ ಆಗ ಗಂಡನ ಅಂತ್ಯಸಂಸ್ಕಾರವನ್ನು ಗೌರವಯುತವಾಗಿ ನೆರವೇರಿಸಿದ ಭಾವ ಆವರಿಸಿತು. ಆದರೆ ನಾನು ನನ್ನ ಹಣೆಬರಹವನ್ನು ಹಳಿದುಕೊಳ್ಳುತ್ತಾ, ಚಿತೆಗೆ ಹಾರಲು ಪ್ರಯತ್ನಿಸಿದೆ. ಆದರೆ ಅವರು ಬಿಡಲಿಲ್ಲ. ಅಲ್ಲೇ ನನ್ನನ್ನು ಬಿಟ್ಟುಹೋದರೆ ಮತ್ತೆ ಎಲ್ಲಿ ನಾನು ಮಕ್ಕಳೊಂದಿಗೆ ಬೆಂಕಿಗೆ ಹಾರಿಬಿಡುತ್ತೇನೋ ಎನ್ನುವಂತೆ ಗಂಡನ ದೇಹ ದಹಿಸಿ, ಬೆಂಕಿ ತಣ್ಣಗಾಗುವವರೆಗೂ ಅಲ್ಲೇ ಕುಳಿತಿದ್ದರು. ನನ್ನನ್ನು ಅಷ್ಟು ದೂರ ಕರೆದೊಯ್ದು ಶ್ರಾವಸ್ತಿಯತ್ತ ದಾರಿ ತೋರಿ ಮುಂದೆ ಹೋದರು.

ಮತ್ತದೇ ಕಲ್ಲುಮುಳ್ಳಿನ ಕಾಲುಹಾದಿ. ಅಂದಾಜಿನ ಮೇಲೆ ಶ್ರಾವಸ್ತಿಯ ದಿಕ್ಕು ಹಿಡಿದು ಹೊರಟಿದ್ದೆ. ಆದರೆ ದಾರಿಯಲ್ಲಿ ಸಿಕ್ಕ ನದಿಯೊಂದು ತುಂಬಿ ಹರಿಯುತ್ತಿತ್ತು. ನಾಲ್ಕು ವರ್ಷದ ಹಿಂದೆ ನಾನೂ ನನ್ನ ಗಂಡನೂ ಬಂದಾಗ ಸದಾ ಬತ್ತಿದಂತೆ ಹರಿಯುತ್ತಿದ್ದ ನದಿಯಲ್ಲಿ ಮೊಳಕಾಲುದ್ದವಷ್ಟೇ ನೀರಿತ್ತು. ಆದರೆ ನಿನ್ನೆಯ ಮಳೆಯ ಪ್ರಭಾವದಿಂದ ಆಳುದ್ದಕ್ಕೂ ಮೀರಿ